# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 965(1028) |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 12.03.2026 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | KSCS RPP Rules 1978 ನಲ್ಲಿ ತಿಳಿಸಿರುವ ಪೂರ್ವಾನ್ವಯ ಮುಂಬಡ್ತಿಯ ಸಂದರ್ಭಗಳು ಯಾವುವು (ವಿಸ್ತರಿಸುವುದು) | 1. THE KARNATAKA STATE CIVIL SERVICES (REGULATION OF PROMOTION, PAY AND PENSION) RULES, 1978ರ ನಿಯಮ 2ರಲ್ಲಿ ಪೂರ್ವಾನ್ವಯ ಮುಂಬಡ್ತಿ ನೀಡುವ ಸಂದರ್ಭಗಳನ್ನು ವಿವರಿಸಲಾಗಿದ್ದು, ಕೆಳಗಿನಂತಿರುತ್ತವೆ:-<br><br>(ಎ) ಆತನ ವಿರುದ್ಧ ಬಾಕಿ ಇದ್ದ ಶಿಸ್ತು ವ್ಯವಹರಣೆಗಳ ಅಥವಾ ಕ್ರಿಮಿನಲ್ ಅಭಿಯೋಜನೆಯ ಅಥವಾ ಇವೆರಡರ ಕಾರಣದಿಂದ ತಡೆಹಿಡಿಯಲಾಗಿದ್ದು ಮತ್ತು ತರುವಾಯ ಆತನನ್ನು ದೋಷಮುಕ್ತಗೊಳಿಸಿದ್ದರೆ ಅಥವಾ ನಿರ್ದೋಷಿಯೆಂದು ಖುಲಾಸೆ ಮಾಡಿದ್ದರೆ; ಅಥವಾ)<br><br>(ಬಿ) ಆತ ಬೇರೊಂದು ಇಲಾಖೆಯಲ್ಲಿ ಪ್ರತಿನಿಯೋಜನೆಯ ಮೇಲೆ ಕೆಲಸ ಮಾಡುತ್ತಿದ್ದನೆಂಬ ಕಾರಣದಿಂದ ಅಥವಾ ಅನ್ಯಥಾ ಪರಿಗಣಿಸಿರದಿದ್ದರೆ; ಅಥವಾ<br><br>(ಸಿ) ಆತನನ್ನು ಅಂತರರಾಜ್ಯ ತಾತ್ಕಾಲಿಕ ಅಥವಾ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಅಥವಾ ಶ್ರೇಣಿ ಪಟ್ಟಿಯಲ್ಲಿ ತಪ್ಪಾಗಿ ಅಥವಾ ದೋಷಯುಕ್ತವಾಗಿ ಸೂಚಿಸಲಾಗಿದೆ ಎಂಬ ಕಾರಣದಿಂದ ಪರಿಗಣಿಸಿರದಿದ್ದರೆ:<br><br>[(ಡಿ) ಆತನ ರಹಸ್ಯ ವರದಿಗಳಲ್ಲಿ ದಾಖಲಾಗಿದ್ದ ಪ್ರತಿಕೂಲ ಷರಾಗಳ ಕಾರಣದಿಂದ ಗಣನೆಗೆ ತೆಗೆದುಕೊಂಡಿರದಿದ್ದರೆ ಹಾಗೂ ತರುವಾಯ ಆ ಷರಾಗಳನ್ನು ತೆಗೆದುಹಾಕಿದ್ದರೆ];<br><br>2. ಶ್ರೇಣಿ ಪಟ್ಟಿ ಅಥವಾ ತಾತ್ಕಾಲಿಕ ಅಂತರರಾಜ್ಯ ಜೇಷ್ಠತಾಪಟ್ಟಿ ಅಥವಾ ಅಂತಿಮವಾದುದಲ್ಲದ ಯಾವುದೇ ಇತರ ಅಂತರರಾಜ್ಯ ಜೇಷ್ಠತಾ ಪಟ್ಟಿಯನ್ನು ಪ್ರವರ್ತನೆಗೊಳಿಸುವಾಗ ಸಮರ್ಥನೀಯವಲ್ಲದ ಕಾರಣದಿಂದ ಬಡ್ತಿ ನೀಡುವುದಕ್ಕೆ ಆತನನ್ನು ಪರಿಗಣಿಸಿರದಿದ್ದರೆ;<br>3. ಚಾಲ್ತಿಯಲ್ಲಿದ್ದ ಪಟ್ಟಿಯಲ್ಲಿನ ಆತನ ಜೇಷ್ಠತೆಗನುಸಾರವಾಗಿ ಅರ್ಹತೆ ಹೊಂದಿದ್ದರೆ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳಿಗನುಸಾರ ಬಡ್ತಿಗೆ ಅನ್ಯಥಾ ಅರ್ಹನಾಗಿದ್ದರೆ- ಸಕ್ಷಮ ಪ್ರಾಧಿಕಾರಿಯು ಅವನನ್ನು ಹುದ್ದೆಯ ಸ್ವತಂತ್ರ ಪ್ರಭಾರದಲ್ಲಿ ಮಾತ್ರ ಇರಿಸಿದ್ದರೆ ಮತ್ತು ಆತನು ಸದರಿ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಿದ್ದರೆ ಒಂದು ಪೂರ್ವಾನ್ವಯ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಬಡ್ತಿ ನೀಡಬಹುದು. |

| | | |
|---|---|---|
| ಅ) | ಸದರಿ ಅಧಿನಿಯಮದ ಸೆಕ್ಷನ್ 4 ರಲ್ಲಿ ಬಡ್ತಿಗಳು ಇತ್ಯಾದಿ ಹಂಚಿಕೆದಾರರು ಇದರಡಿ ನಿಜವಾದ ಮುಂಬಡ್ತಿಯ ಅರ್ಹತೆ ದಿನಾಂಕದಿಂದ ಕಾಲ್ಪನಿಕ ಜೇಷ್ಠತೆ ನೀಡಿ ಹುದ್ದೆಗಳ ಮರು ಹಂಚಿಕೆ ಮಾಡುವ ಸೂಚನೆಯ ಸಂದರ್ಭಗಳು ಏನು; (ವಿವರಿಸುವುದು) | ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 4ರನ್ವಯ ರಾಜ್ಯ ಸಿವಿಲ್ ಸೇವೆಯ ಯಾವುದೇ ವರ್ಗದ ಹುದ್ದೆಯಿಂದ ಸೇವೆಯ ಮುಂದಿನ ಉನ್ನತ ವರ್ಗಕ್ಕೆ ಅಥವಾ ದರ್ಜೆಗೆ ನೀಡುವ ಮುಂಬಡ್ತಿ ಸಂದರ್ಭದಲ್ಲಿ ಜೇಷ್ಠತೆಯಲ್ಲಿನ ವ್ಯತ್ಯಾಸದ ಹಿನ್ನಲೆಯಲ್ಲಿ ಜೇಷ್ಠತೆಯಲ್ಲಿ ಹಿರಿಯ ನೌಕರರನ್ನು ಪರಿಗಣನೆಗೆ ತೆಗೆದುಕೊಳ್ಳದೆ ಜೇಷ್ಠತೆಯಲ್ಲಿ ನಿಕಟ ಕಿರಿಯ ನೌಕರರಿಗೆ ಮುಂಬಡ್ತಿ ನೀಡಿದರ, ನಿಕಟ ಕಿರಿಯ ನೌಕರನು ಸೇವೆಯ ಮುಂದಿನ ಹುದ್ದೆಗೆ ಮುಂಬಡ್ತಿ ಹೊಂದಿದ ದಿನಾಂಕದಿಂದ ಜೇಷ್ಠತೆಯಲ್ಲಿ ಹಿರಿಯ ನೌಕರನು ಸದರಿ ಹುದ್ದೆಯನ್ನುಹೊಂದಿರುತ್ತಾನೆಂದು ಪರಿಗಣಿಸಿ ಸದರಿ ಹುದ್ದೆಗೆ ವಾಸ್ತವವಾಗಿ ಮುಂಬಡ್ತಿ ಹೊಂದಿದ ದಿನಾಂಕದಿಂದ ವೇತನಕ್ಕೆ ಅರ್ಹತೆಯನ್ನು ಹೊಂದಿರುತ್ತಾರೆ. ಆದರೆ ಅವನು ವಾಸ್ತವವಾಗಿ ಬಡ್ತಿಯನ್ನು ಪಡೆದ ದಿನಾಂಕದಿಂದ ಹಿಂದಿನ ಅವಧಿಗೆ ಯಾವುದೇ ಬಾಕಿ ಸಂದಾಯಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ. |
| ಇ) | KSCS RPP Rules 1978 ಅಧಿನಿಯಮ ಹಾಗೂ ಅದರಡಿ ಹೊರಡಿಸಿರುವ ನಿಯಮಗಳು 371ಜೆ ನಿಯಮಾನುಸಾರ ಸ್ಥಳೀಯ ವೃಂದದ ಹುದ್ದೆಗಳಿಗೂ ಅನ್ವಯಿಸಿರುವುದರಿಂದ ಸದರಿ ಅಧಿನಿಯಮ Section 4 ರ ಪ್ರಕಾರ ನಿಜವಾದ ಅರ್ಹತೆಯ ದಿನಾಂಕದಿಂದ ಕಲ್ಯಾಣ ಕರ್ನಾಟಕದ ಹುದ್ದೆಗಳಿಗೆ ಕಾಲ್ಪನಿಕ ಜೇಷ್ಠತೆ ನೀಡಿ ಮರು ಜೇಷ್ಠತೆ ನಿಗದಿಪಡಿಸಬಹುದೇ; | ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ ಕಂಡಿಕೆ 5(1)ರಲ್ಲಿ The region for which local cadre has been organized in respect of any category of posts, shall be a separate unit for the purposes of recruitment, appointment, seniority, promotion and transfer and such other matters as may be specified by the State Government in respect of that category of posts ಎಂದಿರುತ್ತದೆ. ಸದರಿ ಆದೇಶದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮ 2013ನ್ನು ಹೊರಡಿಸಲಾಗಿದ್ದು, ಸದರಿ ನಿಯಮಗಳ ನಿಯಮ 7(1)ರಲ್ಲಿ The Competent Authority shall maintain separate seniority, in each local cadre and Residuary Parent Cadre ಎಂದು ತಿಳಿಸಲಾಗಿರುತ್ತದೆ.<br>ಮೇಲಿನ ನಿಯಮಗಳಂತೆ ಸ್ಥಳೀಯ ಮತ್ತು ಮಿಕ್ಕುಳಿದ ವೃಂದಗಳು ಜೇಷ್ಠತೆಗೆ ಸಂಬಂಧಿಸಿದಂತೆ ಪ್ರತ್ಯೇಕ ಘಟಕಗಳಾಗಿರುವ ಹಿನ್ನಲೆಯಲ್ಲಿ ಮತ್ತೊಂದು ವೃಂದದಲ್ಲಿ ಜೇಷ್ಠತೆಯಲ್ಲಿ ಕಿರಿಯ ವ್ಯಕ್ತಿಯು ಮುಂಬಡ್ತಿ ಹೊಂದಿದಲ್ಲಿ THE KARNATAKA STATE CIVIL SERVICES (REGULATION OF PROMOTION, PAY AND PENSION) ACT, 1973ರ ಸೆಕ್ಷನ್ 4ರನ್ವಯ ಕಾಲ್ಪನಿಕವಾಗಿ ಅರ್ಹತಾ ದಿನಾಂಕವನ್ನು ನಿಗಧಿಪಡಿಸಿ ಜೇಷ್ಠತೆ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| ಈ) | ವಿವಿಧ ಇಲಾಖೆಗಳಲ್ಲಿ ಆಡಳಿತಾತ್ಮಕ ಸಮಸ್ಯೆಗಳನ್ನು ಸರಿಪಡಿಸಲು 371 ಜೆ ನಿಯಮಾನುಸಾರ ಹೈ-ಕ ಕೇಡರ್ ಹುದ್ದೆಗಳಿಗೆ ಕಾಲ್ಪನಿಕ ಜೇಷ್ಠತೆ ನೀಡಿ ಮುಂಬಡ್ತಿ ನೀಡಲು 371 ಜೆ ಉಪ ಸಮಿತಿ ನಿರ್ದೇಶನ ನೀಡಿದ್ದು, ಅದರಂತೆ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು? | ದಿನಾಂಕ 04.01.2024ರಂದು ನಡೆದ ಅನುಚ್ಛೇಧ 371(ಜೆ) ಕುರಿತಾದ ಸಚಿವ ಸಂಪುಟ ಉಪ ಸಮಿತಿ ಸಭೆಯಲ್ಲಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 13868/2020ರಲ್ಲಿ ದಿನಾಂಕ 01.08.2023ರ ಅಂತಿಮ ತೀರ್ಪಿನ ಆದೇಶವನ್ನು ಅನುಷ್ಠಾನಗೊಳಿಸಿ, ಕರ್ನಾಟಕ ಸರ್ಕಾರ ಸಚಿವಾಲಯದ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಅರ್ಹರಿರುವ ಎಲ್ಲಾ ಅಧಿಕಾರಿ ಹಾಗೂ ನೌಕರರ ಜೇಷ್ಠತೆಯನ್ನು ದಿನಾಂಕ 21.01.2014ರಿಂದ ಜಾರಿಗೆ ಬರುವಂತೆ ಸೇವಾ ಜೇಷ್ಠತಾ ಪಟ್ಟಿಯನ್ನು ಮರು ಹೊಂದಾಣಿಕೆ ಮಾಡಿ ಕಾಲ್ಪನಿಕ ಜೇಷ್ಠತೆ ನಿಗಧಿಪಡಿಸಿ Notional Seniorityಯೊಂದಿಗೆ ಮುಂಬಡ್ತಿಯನ್ನು ನೀಡಲು ಕೂಡಲೇ ಸೂಕ್ತ ಕ್ರಮವಹಿಸಲು ಸೂಚಿಸಲಾಗಿರುತ್ತದೆ. ಅದರಂತೆ ಕರ್ನಾಟಕ ಸರ್ಕಾರ ಸಚಿವಾಲಯದ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಅಧಿಕಾರಿ ನೌಕರರ ಅರ್ಹತಾ ದಿನಾಂಕಗಳನ್ನು ಉಳಿಕೆ ಮೂಲ ವೃಂದದ ಅಧಿಕಾರಿ ನೌಕರರುಗಳಿಗೆ ಮುಂಬಡ್ತಿ ನೀಡಲಾದ ದಿನಾಂಕಗಳೆಂದು ಪರಿಗಣಿಸಿ ಕಾಲ್ಪನಿಕವಾಗಿ ಮರುನಿಗಧಿಪಡಿಸಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ. |

| | | |
|---|---|---|
| ಉ) | 371 ಜೆ ಉಪ ಸಮಿತಿಯ ನಿರ್ದೇಶನದಂತೆ ಕಲ್ಯಾಣ ಕರ್ನಾಟಕದ ಹುದ್ದೆಗಳನ್ನು ಮರು ಹಂಚಿಕೆ ಮಾಡಿ ಕಾಲ್ಪನಿಕ ಜೇಷ್ಠತೆ ನೀಡಲು KSCP RPP Act 1973 ಸೆಕ್ಷನ್ 3 ರಾಜ್ಯಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮುಂಬಡ್ತಿ ಭವಿಷ್ಯವರ್ತಿಯಾಗಿ ಜಾರಿ ಆಗಲಿವೆ ಎಂದು ತಿಳಿಸಿರುವುದರಿಂದ ಹೈ-ಕ ಭಾಗ ನೌಕರರಿಗೆ ಅನ್ಯಾಯ ಆಗುವುದು ಸರಕಾರದ ಗಮನಕ್ಕೆ ಬಂದಿದೆಯೇ; ಗಮನಕ್ಕೆ ಬಂದಿದ್ದರೇ, ಈ ಬಗ್ಗೆ ಸರಿಪಡಿಸುವ ಅಗತ್ಯ ಕ್ರಮ ಮೇಲ್ಮನವಿ ಪ್ರಾಧಿಕಾರದ ಮುಂದೆ ಇದೆಯೇ; (ಮಾಹಿತಿ ನೀಡುವುದು) | ಸ್ಥಳೀಯ ಮತ್ತು ಮಿಕ್ಕುಳಿದ ವೃಂದಗಳು ಪ್ರತ್ಯೇಕ ಘಟಕಗಳಾಗಿದ್ದು, THE KARNATAKA STATE CIVIL SERVICES (REGULATION OF PROMOTION, PAY AND PENSION) RULES, 1978ರ ನಿಯಮಗಳಲ್ಲಿ ಉಲ್ಲೇಖಿಸಿರುವ ಸಂದರ್ಭಗಳನ್ನು ಹೊರತುಪಡಿಸಿ ಬೇರೆ ಸಂದರ್ಭಗಳಲ್ಲಿ ಪೂರ್ವಾನ್ವಯ ಮುಂಬಡ್ತಿ ನೀಡಲು ಅವಕಾಶವಿರುವುದಿಲ್ಲ. |
| ಊ) | ಕಲ್ಯಾಣ ಕರ್ನಾಟಕದ ಹುದ್ದೆಗಳನ್ನು 371 ಜೆ ನಿಯಮಾನುಸಾರ ಹಂಚಿಕೆ ಮಾಡದೆ ಆಗಿರುವ ಅನ್ಯಾಯ ಸರಿಪಡಿಸುವಲ್ಲಿ ನ್ಯಾಯ ಸಮ್ಮತ ಮುಂಬಡ್ತಿಯಿಂದ ವಂಚಿತರಾದವರಿಗೆ ನ್ಯಾಯ ಒದಗಿಸಲು ಸರಕಾರವು ಕೈಗೊಂಡಿರುವ ಅಗತ್ಯ ಕ್ರಮಗಳೇನು? | ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 ಮತ್ತು ಅದರಡಿಯಲ್ಲಿ ಹೊರಡಿಸಲಾಗಿರುವ ನಿಯಮಗಳನ್ವಯ ವೃಂದ ನಿಯಂತ್ರಣ ಪ್ರಾಧಿಕಾರಗಳು ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳನ್ನು ರಚಿಸಿ ಅರ್ಹ ವ್ಯಕ್ತಿಗಳಿಗೆ ಸ್ಥಳೀಯ ವೃಂದ ಸೇರ್ಪಡೆಗೊಳ್ಳಲು ಅಭಿಮತ ಸಲ್ಲಿಸಲು ಅವಕಾಶವನ್ನು ಕಲ್ಪಿಸಬೇಕಾಗಿರುತ್ತದೆ. ಈ ಪ್ರಕ್ರಿಯೆಯು ಅಂತ್ಯಗೊಳ್ಳುವವರೆಗೆ ಮುಂಬಡ್ತಿಗಳನ್ನು ಮೂಲ ಜೇಷ್ಠತೆಯನ್ವಯವೇ ನೀಡಬೇಕಾಗಿದ್ದು, ಒಮ್ಮೆ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳನ್ನು ರಚಿಸಿದ ತರುವಾಯ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳಿಗೆ ಪ್ರತ್ಯೇಕವಾಗಿ ಮುಂಬಡ್ತಿಗಳನ್ನು ನೀಡಬೇಕಾಗಿರುತ್ತದೆ. ಆದ್ದರಿಂದ ಈ ವಿಷಯದಲ್ಲಿ ಯಾವುದೇ ಕ್ರಮದ ಅಗತ್ಯ ಕಂಡುಬರುವುದಿಲ್ಲ. |

**ಸಂಖ್ಯೆ:ಸಿಆಸುಇ 19 ಹೈಕಕೋ 2026**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ